ದಿನಾಂಕಃ 03.10.2023 ರಂದು ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರ ಮಾನ್ಯ ಶ್ರೀ. ಎಂ ಎಸ್. ವಕೀಲರಿಂದಃ**

ನಾನು ಹತ್ತನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಬೆಂಗಳೂರಿನ Sacroward Hospital ನಲ್ಲಿ ತೋರಿಸಿರುತ್ತೇನೆ. ಸಂಜೆ 6.15 ಗಂಟೆಗೆ ರೈಲ್ವೆ ನಿಲ್ದಾಣಕ್ಕೆ ಬಂದಿರುತ್ತೇವೆ. ಸಂಜೆ 6.15 ಗಂಟೆಗೆ ರೈಲು ಹೊರಟಿರುತ್ತದೆ. ರೈಲು ಮದ್ದೂರು ನಿಲ್ದಾಣವನ್ನು ರಾತ್ರಿ 7.45 ಗಂಟೆಗೆ ತಲುಪಿರುತ್ತದೆ. ರೈಲು ಮದ್ದೂರಿನಲ್ಲಿ ಎಷ್ಟು ನಿಮಿಷ ನಿಂತಿತ್ತು ಎಂದು ಈಗ ನನಗೆ ನೆನಪಿಲ್ಲ, ಏಕೆಂದರೆ ಈಗಾಗಲೇ 9 ವರ್ಷಗಳಾಗಿರುತ್ತದೆ. ರೈಲು ಮದ್ದೂರು ನಿಲ್ದಾಣದ 1 ನೇ ಪ್ಲಾಟ್ ಫಾರಂ ನಲ್ಲಿ ನಿಂತಿರುತ್ತದೆ. ರೈಲು ನಿಂತ ನಂತರ ನಾವು ಕಾಫಿ ಖರೀದಿಸಿರುತ್ತೇವೆ. ರೈಲು ನಿಂತ ನಂತರ ನಾನು ಆಸಾಮಿಯನ್ನು ನೋಡಿರುತ್ತೇನೆ. ಅದು ladies compartment ಅದ ಕಾರಣ ಆತನನ್ನು ಗಮನಿಸಿರುತ್ತೇನೆ. ನಾನು ಒಬ್ಬ ವ್ಯಕ್ತಿಯನ್ನು ಗಮನಿಸಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಮಹಿಳಾ ಭೋಗಿ ಪೂರ್ತಿ ತುಂಬಿತ್ತು. ನಾನು ರೈಲಿನ ಬಾಗಿಲಿನ ಪಕ್ಕದ ಸೀಟಿನಲ್ಲಿ ಕುಳಿತಿದ್ದೇನು. ರೈಲಿನಲ್ಲಿ 3 ಜನ ಕುಳಿತುಕೊಳ್ಳುವ ಸೀಟ್ ಮತ್ತು ಒಬ್ಬರೇ ಕುಳಿತುಕೊಳ್ಳುವ ಸೀಟ್ ಇರುತ್ತದೆ ಎಂದರೆ ಸರಿ. ನಾವು 3 ಜನ ಕುಳಿತುಕೊಳ್ಳುವ ಸೀಟ್ ನಲ್ಲಿ ಕುಳಿತಿದ್ದೇನು. ನನ್ನ ತಾಯಿ ಕಿಟಕಿಯ ಪಕ್ಕ ಕುಳಿತಿದ್ದರು. ನಾನು ಮಧ್ಯ ಕುಳಿತಿದ್ದೇನು. ನನ್ನ ಪಕ್ಕ ಬೇರೆ ಯಾರೋ ಕುಳಿತಿದ್ದರು.

ಇಂತಹ ವ್ಯಕ್ತಿಯೇ ಚೈನನ್ನು ಕಿತ್ತುಕೊಂಡು ಹೋದರು ಎಂದು ಹೇಳಲು ನನಗೆ ಸಾಧ್ಯವಿಲ್ಲ ಎಂದರೆ ಸರಿಯಲ್ಲ, ಹೇಳಬಹುದು. ರೈಲು move ಅಗುತ್ತಿದ್ದಾಗ ಚೈನ್ ಕಿತ್ತುಕೊಂಡು ಕೆಳಗೆ ಇಳಿದಿರುತ್ತಾನೆ. ನಾನು ಕುಳಿತಿ ಬಲಗಡೆ ಸದರಿ ವ್ಯಕ್ತಿ ಓಡಿ ಹೋಗಿರುತ್ತಾನೆ. ಬಲಗಡೆ ಪ್ಲಾಟ್ ಫಾರಂ ಇರುವುದಿಲ್ಲ, ರೈಲು ಹಳಿಯ ಮೇಲೆ ಓಡಿ ಹೋಗಬೇಕು ಎಂದರೆ ಸರಿ, ಅಲ್ಲಿಯೇ ಇಳಿದು ಓಡಿ ಹೋಗಿರುತ್ತಾನೆ. ಬಲಭಾಗದಲ್ಲಿ ಯಾವುದೇ ಒಬ್ಬ ವ್ಯಕ್ತಿ ಇಳಿದು ಓಡಿ ಹೋಗಲು ಸಾಧ್ಯವಿಲ್ಲ, ನಾನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಕೈಯಲ್ಲೇ ಕಾಫಿ ಇದ್ದು ಚೈನ್ ಕಿತ್ತ ರಭಸಕ್ಕೆ ಕಾಫಿ ನನ್ನ ಮೇಲೆ ಚೆಲ್ಲಿರುತ್ತದೆ. ಸದರಿ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ಮಂಡ್ಯಕ್ಕೆ ರಾತ್ರಿ 8.15 ಗಂಟೆಗೆ ತಲುಪಿರುತ್ತೇನೆ. ಮಂಡ್ಯ ರೈಲ್ವೆ ಠಾಣೆಯಲ್ಲಿ ಹೋಗಿ ಕೇಳಿರುತ್ತೇವೆ, ಅವರು ವ್ಯಾಪ್ತಿ ನಮಗೆ ಬರುವುದಿಲ್ಲ, ಮೈಸೂರಿಗೆ ಹೋಗಿ ದೂರು ಕೊಡಿ ಎಂದು ಹೇಳಿರುತ್ತಾರೆ. ನಾವು ಮಂಡ್ಯ ರೈಲ್ವೆ ಪೊಲೀಸ್ ಠಾಣೆಯಲ್ಲಿ ಸುಮಾರು ರಾತ್ರಿ 9.15 ಗಂಟೆಯವರೆಗೂ ಇದ್ದೇವು. ನನ್ನ ತಮ್ಮ ಸುಮಾರು 9.15-9.20 ಗಂಟೆಗೆ ಬಂದಿರುತ್ತಾರೆ. ನನ್ನ ತಮ್ಮ ಬಂದ ತಕ್ಷಣವೇ ಮಾತನಾಡಿಕೊಂಡು ಅಲ್ಲಿಂದ ಕಾರಿನಲ್ಲಿ ಮೈಸೂರಿಗೆ ಹೊರಟಿರುತ್ತೇವೆ.

ನಾವು ಮೈಸೂರು ತಲುಪಿದಾಗ ರಾತ್ರಿ ಸುಮಾರು 10.30-10.45 ಅಗಿರುತ್ತದೆ. ಮಂಡ್ಯದಿಂದ ಮೈಸೂರಿಗೆ ಹೋಗಲು ಸುಮಾರು 1½ ರಿಂದ 1¾ ಗಂಟೆ ಬೇಕಾಗುತ್ತದೆ ಎಂದರೆ ಸರಿಯಲ್ಲ, ರಾತ್ರಿಯಾಗಿದ್ದ ಕಾರಣ ಬೇಗ ಹೋಗಿರುತ್ತೇವೆ. ನಾನು ದೂರು ಕೊಟ್ಟರೂ ಸಹ ಪೊಲೀಸರು ಅದನ್ನು ಪಡೆದುಕೊಳ್ಳಲಿಲ್ಲ, ಏಕೆಂದರೆ ನಾನು ಮೈಸೂರಿಗೆ ಹೋಗುವ ಮುಂಚೆಯೇ ಆರೋಪಿಯನ್ನು ಮತ್ತು ನನ್ನ ಚೈನನ್ನು ಯಾರೋ ಮೂರನೇ ವ್ಯಕ್ತಿ ಹಿಡಿದು ಠಾಣೆಗೆ ಕರೆದುಕೊಂಡು ಬಂದಿದ್ದರು. ಆರೋಪಿಯನ್ನು ಹಿಡಿದ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿಯನ್ನು ನನ್ನ ತಮ್ಮ ಬಂದಾಗ ನೋಡಿರುತ್ತೇನೆ. ನಾನು ಆರೋಪಿಯನ್ನು ನೋಡಿ ನಂತರ ಮೈಸೂರಿಗೆ ಹೋಗಿರುತ್ತೇನೆ. ನಾನು ವಾಪಸ್ಸು ಬಂದು ಮದ್ದೂರಿನಲ್ಲಿ ಆರೋಪಿಯನ್ನು ನೋಡಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ಮಹಜರಿಗೆ ನಾನು ಸಹಿ ಮಾಡಿಲ್ಲ. ಪೊಲೀಸರು ಮಹಜರು ಮಾಡಿ ನನ್ನ ಸಹಿ ಪಡೆದುಕೊಂಡಿಲ್ಲ, ಆದರೆ ಚೈನ್ ಬಿದ್ದಿರುವ ಜಾಗವನ್ನು ತೋರಿಸಿರುತ್ತಾರೆ. ಸದರಿ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆರೋಪಿ ಯಾರು ಎಂಬ ವಿಚಾರ ನನಗೆ ಗೊತ್ತಿಲ್ಲ, ಪೊಲೀಸರು ಹೇಳಿಕೊಟ್ಟಂತೆ ನಾನು ಈ ದಿನ ನ್ಯಾಯಾಲಯದಲ್ಲಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚೈನನ್ನು ಕಿತ್ತುಕೊಂಡು ಹೋದ ವ್ಯಕ್ತಿ ಯಾರು ಎಂದು ಗೊತ್ತಿರುವುದಿಲ್ಲ, ಆದರೂ ಸಹ ಪೊಲೀಸರು ಸುಳ್ಳು ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸಿದ್ದು, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು ನ್ಯಾಯಾಲಯದಲ್ಲಿಯೇ ಮೊದಲ ಬಾರಿಗೆ ನೋಡಿರುತ್ತೇನೆ, ಈ ಹಿಂದೆ ಯಾವತ್ತು ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ, ಪೊಲೀಸರ ಮಾತು ಕೇಳಿ ಸುಳ್ಳು

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ